# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s FPEL Ujwal Private Limited ಕಂಪನಿಗೆ ಬೆಳಗಾವಿ ಜಿಲ್ಲೆ, ನಿಪ್ಪಾಣಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 50 ಮೆ.ವ್ಯಾ. ಸಾಮರ್ಥ್ಯದ ಹೈಬ್ರಿಡ್ ಯೋಜನೆಯನ್ನು 68.9 ಮೆ.ವ್ಯಾ (48.6 ಮೆ.ವ್ಯಾ. ಪವನ + 20.3 ಮೆ.ವ್ಯಾ. ಸೌರ) ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರಿ ಆದೇಶ ಸಂಖ್ಯೆ:ಎನರ್ಜಿ 203 ಎನ್‌ಸಿಇ 2022, ದಿನಾಂಕ: 07.05.2022.
2) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಎನರ್ಜಿ 203 ಎನ್‌ಸಿಇ 2022, ದಿನಾಂಕ: 13.06.2022
3) ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಇ.ಡಿ.ಎಲ್. ರವರ ಪತ್ರ ಸಂಖ್ಯೆ: ಕೆ.ಆರ್.ಇ.ಡಿ.ಎಲ್/08/FPELUPL 50 to 68.9 MW (29.7 W + 20.3 S)/Nippani/F-36(2022)/0312, ದಿನಾಂಕ:03.02.2023.
4) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ M/s FPEL Ujwal Private Limited ಕಂಪನಿಗೆ ಬೆಳಗಾವಿ ಜಿಲ್ಲೆಯ, ನಿಪ್ಪಾಣಿ ತಾಲ್ಲೂಕಿನ ಶೆಂಡೂರ್ ಮತ್ತು ಗೊಂಡಿಕುಪ್ಪಿ ಗ್ರಾಮಗಳಲ್ಲಿ 50 ಮೆ.ವ್ಯಾ (29.7 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ M/s FPEL Ujwal Private Limited ಕಂಪನಿಗೆ ಬೆಳಗಾವಿ ಜಿಲ್ಲೆಯ, ನಿಪ್ಪಾಣಿ ತಾಲ್ಲೂಕಿನ ಶೆಂಡೂರ್ ಮತ್ತು ಗೊಂಡಿಕುಪ್ಪಿ ಗ್ರಾಮಗಳಲ್ಲಿ 50 ಮೆ.ವ್ಯಾ (29.7 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಹೊಸ ನವೀಕರಿಸಬಹುದಾದ ಇಂಧನ ನೀತಿ 2022-27ರಂತೆ ಹಂಚಿಕೆ ಆದೇಶದ ದಿನಾಂಕದಿಂದ 2 ವರ್ಷಗಳ ಅವಧಿಯೊಳಗೆ ಅನುಷ್ಠಾನಗೊಳಿಸಬೇಕಂಬ ಷರತ್ತು ವಿಧಿಸಿ ತಿದ್ದುಪಡಿ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್. ಇ.ಡಿ.ಎಲ್. ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s FPEL Ujwal Private Limited ಕಂಪನಿಗೆ ಹಂಚಿಕೆಯಾಗಿರುವ 50 ಮೆ.ವ್ಯಾ (29.7 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯವನ್ನು 68.9 ಮೆ.ವ್ಯಾ (48.6 ಮೆ.ವ್ಯಾ. ಪವನ + 20.3 ಮೆ.ವ್ಯಾ. ಸೌರ) ಹೆಚ್ಚಿಸುವಂತೆ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಅನುಮತಿ ನೀಡುವಂತೆ ಅಭಿವೃದ್ಧಿದಾರರು ಕೋರಿದ್ದು, ಈ ಸಂಬಂಧ 18.9 ಮೆ.ವ್ಯಾ. ಸಾಮರ್ಥ್ಯಕ್ಕೆ ಅರ್ಜಿ ಮತ್ತು 30% ಸಂಸ್ಕರಣಾ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಸಂದಾಯ ಮಾಡಿರುತ್ತಾರೆ. ಬಾಕಿ 70% ಸಂಸ್ಕರಣಾ ಶುಲ್ಕವನ್ನು ಹಂಚಿಕೆ ಆದೇಶ ಹೊರಡಿಸಿದ ನಂತರ ಕೆ.ಆರ್.ಇ.ಡಿ.ಎಲ್. ನಿಯಮಿತದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಪಾವತಿಸುವುದಾಗಿ ತಿಳಿಸಿರುತ್ತಾರೆ.

M/s FPEL Ujwal Private Limited ಕಂಪನಿಯು ದಿನಾಂಕ:04.02.2022 ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ತೆಲಂಗಾಣದ ಹೈದರಾಬಾದಿನಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿ ಕಂಪನಿಯು M/s Fourth Partner Energy Private Limited ಕಂಪನಿಯಿಂದ ಸ್ಥಾಪಿಸಲ್ಪಟ್ಟ SPV ಸಂಸ್ಥೆಯಾಗಿರುತ್ತದೆ. M/s Fourth Partner Energy Private Limited ಕಂಪನಿಯ ನೆಟ್ ವರ್ತ್ ದಿನಾಂಕ:31.03.2021ರ ಅಂತ್ಯಕ್ಕೆ ರೂ.334.62 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ರವರು ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ಇದನ್ನು ಕೆ.ಆರ್.ಇ.ಡಿ.ಎಲ್. ನಿಯಮಿತದ

.....2

ಲೆಕ್ಕವಿಭಾಗದಿಂದ ಪರಿಶೀಲಿಸಲಾಗಿದೆ ಎಂದು ಕೆ.ಆರ್.ಇ.ಡಿ.ಎಲ್. ನಿಯಮಿತವು ತಿಳಿಸುತ್ತಾ, M/s FPEL Ujwal Private Limited ಕಂಪನಿಗೆ ಬೆಳಗಾವಿ ಜಿಲ್ಲೆಯ, ನಿಪ್ಪಾಣಿ ತಾಲ್ಲೂಕಿನ ಶೆಂಡೂರ್ ಮತ್ತು ಗೊಂಡಿಕುಪ್ಪಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 50 ಮೆ.ವ್ಯಾ (29.7 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯನ್ನು 68.9 ಮೆ.ವ್ಯಾ. (48.6 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯಕ್ಕೆ ಹೆಚ್ಚಿಸುವ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಹಂಚಿಕೆ ನೀಡಬಹುದೆಂಬ ಅಭಿಪ್ರಾಯದೊಂದಿಗೆ ಸದರಿ ಯೋಜನೆಯ ಚೆಕ್‌ಲಿಸ್ಟನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ನೀಡುವ ಕುರಿತು ಕೆ.ಇ.ಆರ್.ಸಿ. ಆಯೋಗವು ದಿನಾಂಕ:19.01.2023ರಂದು ಹೊರಡಿಸಿರುವ ಆದೇಶದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ:

BANKING:

Banking shall be permitted on a monthly basis on payment of applicable charges as determined by the Commission in separate orders issued from time to time.

provided that the unutilised banked energy remaining at the end of the month shall not be permitted to be carried forward to subsequent months. However, RE generating station would be entitled to RECs for such energy remaining unutilised at the end of the month.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ರಿಟ್ ಅರ್ಜಿಯಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27 ನೀತಿಯನ್ನು ಪ್ರಶ್ನಿಸಿ M/s Solar Power Developers Association ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:17.08.2022 ರ ಮಧ್ಯಂತರ ಆದೇಶದಲ್ಲಿ ಸದರಿ ನೀತಿಗೆ ತಡೆಯಾಜ್ಞೆ ನೀಡಿರುತ್ತದೆ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶಕ್ಕೊಳಪಟ್ಟು ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ :ಎನರ್ಜಿ 203 ಎನ್‌ಸಿಇ 2022,**
**ಬೆಂಗಳೂರು, ದಿನಾಂಕ:09.03.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s FPEL Ujwal Private Limited ಕಂಪನಿಗೆ ಬೆಳಗಾವಿ ಜಿಲ್ಲೆಯ, ನಿಪ್ಪಾಣಿ ತಾಲ್ಲೂಕಿನ ಶೆಂಡೂರ್ ಮತ್ತು ಗೊಂಡಿಕುಪ್ಪಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 50 ಮೆ.ವ್ಯಾ (29.7 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯನ್ನು 68.9 ಮೆ.ವ್ಯಾ. (48.6 ಮೆ.ವ್ಯಾ ಪವನ + 20.3 ಮೆ.ವ್ಯಾ ಸೌರ) ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತುಗಳಿಗೊಳಪಟ್ಟು ಹೆಚ್ಚಿಸಿ ಆದೇಶಿಸಿದೆ.

**Tentative Latitude and Longitude of WTG Locations for 68.9 MW (48.6 MW Wind + 20.3 MW Solar) capacity Wind-Solar Hybrid Project of M/s FPEL Ujwal Private Limited**

| Sl. No. | Location No. | Latitude | Longitude | Village | Taluk/ District | Survey No | Extent of land required on foot print basis i.e, 4 Acres/WTG for wind and 3.5 Acres/MW for solar projects. |
|---|---|---|---|---|---|---|---|
| 1 | WTG-01 | 16°22'15.68"N | 74°19'22.38"E | Shendur | Nippani/ Belagavi | 337, 338 | 4 |